ಬಳಿಕ ಓದು, ನೃತ್ಯದ ಮರು ಅಭ್ಯಾಸ, ನಟ್ಟುವಾಂಗ, ಸಂಗೀತದ ಅಭ್ಯಾಸ ಮತ್ತು ಸಂಜೆ ನೃತ್ಯ ಕಾರ್ಯಕ್ರಮಗಳ ವೀಕ್ಷಣೆ – ಹೀಗೆ ನಾನು ರಾತ್ರಿ ಕೆಲವು ಗಂಟೆಗಳ ಕಾಲ ನಿದ್ರೆ ಮಾಡುವಾಗಲೂ ನನಗೆ ನೃತ್ಯದ ಕನಸೇ ಬೀಳುತ್ತಿತ್ತು. ಆದ್ದರಿಂದಲೇ ದಿನದ 24 ಗಂಟೆಯೂ ನೃತ್ಯವನ್ನೇ ಉಸಿರಾಡುತ್ತಿದ್ದೆ ಎಂದು ಹೇಳಿದೆ.

ಭಾಗವತುಳ ಸೀತಾರಾಮ ಶರ್ಮ ಅವರಿಂದ ನಟ್ಟುವಾಂಗಮ್ ಮತ್ತು ಕರ್ನಾಟಕ ಶಾಸ್ತ್ರೀಯ ಸಂಗೀತವನ್ನು ಕಲಿತೆ. ಅಭಿನಯ ಕಲೆಯನ್ನು ಪ್ರತ್ಯೇಕವಾಗಿ ಗುರು ಇಂದಿರಾ ಕಾದಂಬಿ ಅವರಿಂದ ಕಲಿತೆ. ಹೀಗೆ 2009ರಲ್ಲಿ ನನ್ನ ನೃತ್ಯಕಲಿಕೆಯು ಒಂದು ಹಂತಕ್ಕೆ ಬಂದು ನಿಂತಾಗ, ಅಡೆಯಾರ್ ಲಕ್ಷ್ಮಣ್ ಅವರು, ರಂಗಪ್ರವೇಶ ಮಾದರಿಯಲ್ಲಿ ಕಾರ್ಯಕ್ರಮ ನೀಡುವಂತೆ ಹೇಳಿದರು. ಚೆನ್ನೈಯ ಪ್ರಸಿದ್ಧ ಕಪಾಲೀಶ್ವರ ದೇವಸ್ಥಾನದಲ್ಲಿ ಮೊದಲ ನೃತ್ಯ ಕಾರ್ಯಕ್ರಮವನ್ನು ಅವರೇ ಆಯೋಜಿಸಿದರು. ಆ ಕಾರ್ಯಕ್ರಮದ ಬಳಿಕ ನನ್ನ ಜೀವನ ದೃಷ್ಟಿಕೋನವೇ ಬದಲಾಯಿತು. ನಾನು ಏನೂ ಇಲ್ಲದೆ, ಯಾರೂ ಇಲ್ಲದೆ, ನೃತ್ಯವೊಂದರ ಜೊತೆಗೆ ಬದುಕಬಲ್ಲೆ ಎಂಬ ವಿಶ್ವಾಸವು ಮೂಡಿತು. ಗುರುಗಳು ಅನೇಕ ಬಾರಿ, ನಾನು ಪೂರ್ವಜನ್ಮದಲ್ಲಿ ಭಾರತೀಯಳಾಗಿದ್ದೆ ಎಂದು ವಿಶ್ವಾಸದಿಂದ ಹೇಳುತ್ತಿದ್ದರು. ನನಗೆ ಕೆಲವೊಮ್ಮೆ ಹಾಗೆ ಅನಿಸಿದ್ದುಂಟು.

**◆ ನೃತ್ಯ ಕಲಿತು ಇಟಲಿಗೆ ಮರಳಿದ ಬಳಿಕ ಬದುಕು ಹೇಗೆ ರೂಪುಗೊಂಡಿತು?**

ನೃತ್ಯ ಕಲಿತು ಇಟಲಿಗೆ ಮರಳಿದ ಬಳಿಕ ಅಲ್ಲಿ ನೃತ್ಯ ತರಗತಿಯೊಂದನ್ನು ಆರಂಭಿಸುವ ಉತ್ಸಾಹ ಮೂಡಿತು. 2009ರಲ್ಲಿ ನನ್ನ ನೃತ್ಯ ಗುರು ಅಡೆಯಾರ್ ಲಕ್ಷ್ಮಣ್ ಅವರು ಯುರೋಪ್ ಪ್ರವಾಸದಲ್ಲಿದ್ದಾಗ ಇಟಲಿಗೂ ಭೇಟಿ ನೀಡಿದರು. ಅದೇ ಸಂದರ್ಭದಲ್ಲಿ ನಾನು 'ಅಕಾಡೆಮಿ ಆಫ್ ಸಂಗಮ್' ಎಂಬ ನೃತ್ಯಶಾಲೆಯನ್ನು ಆರಂಭಿಸಿದೆ. ಗುರುಗಳೇ ಅದನ್ನು ಉದ್ಘಾಟಿಸಿದರು. ಹಾಗೆಂದು ಭರತನಾಟ್ಯದಲ್ಲಿ ಇನ್ನಷ್ಟು ಕಲಿಯುವ, ಹೊಸದನ್ನು ತಿಳಿಯುವ ಕುತೂಹಲ ತಣಿಯಲಿಲ್ಲ. 'ಭಾರತಕ್ಕೆ ಹೋಗಿ ನೃತ್ಯ ಕಲಿತು ಬಂದವಳು' ಎಂಬ ಒಂದು ಟ್ಯಾಗ್‌ಲೈನ್‌ಗೆ ನಾನು ಸೀಮಿತಗೊಳ್ಳುವವಳಲ್ಲ. ಆದ್ದರಿಂದ ವರ್ಷದಲ್ಲಿ ಎರಡು ಬಾರಿ ಭಾರತಕ್ಕೆ ಭೇಟಿ ನೀಡುತ್ತಿದ್ದೆ. ಪ್ರತಿ ಭೇಟಿಯಲ್ಲಿ ಮೂರು ತಿಂಗಳ ಕಾಲ ಇಲ್ಲಿಯೇ ಇದ್ದು ನೃತ್ಯದ ಅಭ್ಯಾಸವನ್ನು ಮುಂದುವರೆಸುತ್ತಿದ್ದೆ. ಇಲ್ಲಿಂದಲೇ ಇಟಲಿಯ ವಿದ್ಯಾರ್ಥಿಗಳಿಗೆ ಆನ್‌ಲೈನ್ ತರಗತಿಗಳನ್ನು ತೆಗೆದುಕೊಳ್ಳುತ್ತಿದ್ದೆ. 2019ರಲ್ಲಿ ಕೋವಿಡ್ ಸೋಂಕು ಕಾಡಿದಾಗ, ದೇಶದ ವಿವಿಧೆಡೆಗಳಲ್ಲಿ ಲಾಕ್‌ಡೌನ್ ಹೇರಲಾಯಿತು. ಆಗ ನಾನು ಅನಿವಾರ್ಯವಾಗಿ ಚೆನ್ನೈಯಲ್ಲಿಯೇ ಉಳಿದಿದ್ದೆ. ಅದಾಗಿ ಇತ್ತೀಚೆಗಿನ ವರ್ಷಗಳಲ್ಲಿ, ನಾನು ಒಂದು ವರ್ಷದಲ್ಲಿ ಬಹುದೀರ್ಘ ಕಾಲ ಚೆನ್ನೈಯಲ್ಲಿಯೂ, ಕೆಲವು ತಿಂಗಳ ಕಾಲ ಇಟಲಿಯಲ್ಲಿಯೂ ವಾಸ ಮಾಡುತ್ತೇನೆ.

ಇಟಲಿಯಲ್ಲಿ ನೃತ್ಯ ತರಗತಿಗೆ ಬರುವವರಲ್ಲಿ ಅನೇಕರು ಭಾರತೀಯ ಮೂಲದವರು. ಇಟಲಿಗೆ ಬಂದು ನೆಲೆಸಿದವರ ಮಕ್ಕಳು ಹೆಚ್ಚಿನ ಆಸಕ್ತಿ ವಹಿಸುತ್ತಾರೆ. ಅಥವಾ ಹೆಚ್ಚಿನ ಅಧ್ಯಯನಕ್ಕೆ ಭಾರತದಿಂದ ಬಂದವರು ಕೂಡ ನೃತ್ಯತರಗತಿಗೆ ಬರುತ್ತಾರೆ. ಸಂಗಮ್ ನೃತ್ಯಶಾಲೆಯಲ್ಲಿ ಕೇವಲ ನೃತ್ಯಪಾಠವಷ್ಟೇ ಅಲ್ಲ, ಕರ್ನಾಟಕ ಶಾಸ್ತ್ರೀಯ ಸಂಗೀತ ಪಾಠ, ಭಾರತೀಯ ಸಂಸ್ಕೃತಿಯ ಹಿನ್ನೆಲೆಯ ವಿವರಣೆ, ಕಲೆ, ತತ್ತ್ವಜ್ಞಾನದ ವಿವರಣೆ, ಪಾಠಗಳು ನಡೆಯುತ್ತವೆ. ಅದೊಂದು ಸಮಗ್ರ ಕಲಾಶಾಲೆ. ಯುರೋಪ್‌ನ ವಿವಿಧೆಡೆಯಿಂದ, ಭಾರತದಿಂದ ಬರುವ ಕಲಾವಿದರು ಇಲ್ಲಿಗೆ ಬಂದು ಪ್ರದರ್ಶನ ನೀಡಿ, ಉಪನ್ಯಾಸ ನೀಡುತ್ತಾರೆ. ಸಂಗಮ್ ಶಾಲೆಯಲ್ಲಿ ಕಲಿತ ಬಳಿಕ ಆಸಕ್ತರಿಗೆ ಭಾರತದಲ್ಲಿಯೂ ಹೆಚ್ಚುವರಿ ಕೋರ್ಸ್‌ಗಳನ್ನು ಕಲಿಯುವ ಅವಕಾಶ ಒದಗಿಸಲಾಗುವುದು. ನನ್ನ ಬಳಿ ನೃತ್ಯ ಕಲಿತ ಇಬ್ಬರು ವಿದ್ಯಾರ್ಥಿನಿಯರು ಚೆನ್ನೈ ಕಲಾಕ್ಷೇತ್ರಕ್ಕೆ ಬಂದು ಉನ್ನತ ಅಧ್ಯಯನ ಮಾಡಿದ್ದಲ್ಲದೇ, ನಾನು ರಂಗಪ್ರವೇಶ ಮಾಡಿದ ಕಪಾಲೀಶ್ವರ ದೇವಸ್ಥಾನದಲ್ಲಿಯೇ ಅವರೂ ರಂಗಪ್ರವೇಶ ಮಾಡಿದರು. ಇದು ನನಗೆ ಬಹಳ ಹೆಮ್ಮೆಯ ಮತ್ತು ಸಂತೃಪ್ತಿ ನೀಡಿದ ವಿಷಯ. ನನ್ನ ವಿದ್ಯಾರ್ಥಿಗಳು ನನಗಿಂತ ಉತ್ತಮರಾಗಿ ಬೆಳೆಯಬೇಕು ಎನ್ನವುದು ನನ್ನ ಆಶಯ.

**◆ ಮೂಗುತಿ ನಿಮಗೆ ಇಷ್ಟವೇ? ಯಾವಾಗ ಮೂಗು ಚುಚ್ಚಿಸಿಕೊಂಡಿರಿ?**